









# ಆಗತ ಸ್ವಾಗತ 2014







# ಶ್ರೀರಾಮ ಪ್ರೌಢಶಾಲೆ

ಮಾತೃಭಾಷೆಯ ಮೂಲಕ ನೀಡುವ ಶಿಕ್ಷಣದಿಂದ ಭಾರತೀಯ ಭಾವನೆಗಳನ್ನು ಬೆಳೆಸಲು ಸಾಧ್ಯ. ನಮ್ಮ ಸಂಸ್ಕೃತಿ ಪರಂಪರೆಯ ಶಿಕ್ಷಣದಿಂದ ಮಾತ್ರ ಸಮಾಜ ಶಕ್ತಿಶಾಲಿಯಾಗುವುದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಸಂಪರ್ಕ ಪ್ರಮುಖ್ ಡಾ॥ಪ್ರಭಾಕರ ಭಟ್ ಹೇಳಿದರು.

ಶ್ರೀರಾಮ ವಿದ್ಯಾಕೇಂದ್ರದ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಕಾರ್ಯಕ್ರಮದಲ್ಲಿ ಮಂಗಳವಾರ ಮಧುಕರ ಸಭಾಂಗಣದಲ್ಲಿ ಅವರು ಮಾತನಾಡಿದರು.

ಧರ್ಮ ಸಂಸ್ಕೃತಿ ನಿತ್ಯ ನೂತನವಾದುದು. ಧರ್ಮದ ಆಧಾರದಿಂದ ಜೀವನ ನಡೆಸಲು ಉತ್ತಮ ಗುರುಗಳ ಮಾರ್ಗದರ್ಶನ ಅಗತ್ಯವಿದೆ. ರಾಷ್ಟ್ರೀಯ ಭಾವನೆಗಳನ್ನು ಜಾಗೃತಗೊಳಿಸುವುದರ ಜೊತೆಗೆ ಸಂಸ್ಕಾರದ ಶಿಕ್ಷಣ ನೀಡುವುದೇ ನಿಜವಾದ ಶಿಕ್ಷಣ. ಬದುಕಿನ ಸಮಸ್ಯೆಗಳನ್ನು ಸವಾಲುಗಳನ್ನು ಎದುರಿಸುವ ಶಕ್ತಿ ಶಿಕ್ಷಣದ ಮೂಲಕ ಸಿಗುವಂತಾಗಬೇಕು. ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದಲ್ಲಿ ಉತ್ತಮ ಸಂಸ್ಕಾರ ನೀಡುವ ಶಿಕ್ಷಣ ಶಿಶುಮಂದಿರದಿಂದ ಪದವಿ ಶಿಕ್ಷಣದವರೆಗೆ ನೀಡಲಾಗುತ್ತಿದೆ ಎಂದು ತಿಳಿಸಿದರು. ವಿದ್ಯಾರ್ಥಿ ಜೀವನದಲ್ಲಿ ಉತ್ತಮ ಶಿಕ್ಷಣವನ್ನು ಮೈಗೂಡಿಸಿಕೊಳ್ಳಲು ಶ್ರಮಪಡಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿ ಹೊಸ ದಿಗಂತ ದಿನಪತ್ರಿಕೆಯ ಸಂಪಾದಕ ಪ್ರಕಾಶ್ ಇಳಂತಿಲ ಮಾತನಾಡಿ ಧ್ಯೇಯ ಮಾರ್ಗದಲ್ಲಿ ಮುನ್ನಡೆಯುವಾಗ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಇಂಗ್ಲೀಷ್ ಮಾಧ್ಯಮ ಶಿಕ್ಷಣದ ಗೊಂದಲದಿಂದ ಹೆತ್ತವರು ಮುಕ್ತರಾಗಬೇಕಾಗಿದೆ. ಮಾತೃಭಾಷೆಯ ಮೂಲಕ ಶಿಕ್ಷಣ ನೀಡುತ್ತಿರುವ ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರ ಮಾದರಿ ಸಂಸ್ಥೆಯಾಗಿದೆ ಎಂದು ಅವರು ಹೇಳಿದರು. ದ.ಕ. ಹಾಲು ಉತ್ಪಾದಕ ಒಕ್ಕೂಟ ಅಧ್ಯಕ್ಷ ರವಿರಾಜ್ ಹೆಗ್ಡೆ ಮಾತನಾಡಿ ವಿದ್ಯಾರ್ಥಿಗಳಲ್ಲಿ ಹೊಸತನ್ನು ಕಲಿಯುವ ಹಠವಿರಬೇಕು. ಯಾವುದಕ್ಕೂ ಭಯಪಡದೆ ಮುನ್ನುಗ್ಗುವ ಗುಣವನ್ನು ಬೆಳೆಸಿಕೊಳ್ಳಬೇಕು. ನಿರಂತರ ಶ್ರಮ ಅಗತ್ಯ ಎಂದು ತಿಳಿಸಿದರು. ಅಳಿಕೆ ಶ್ರೀ ಸತ್ಯಸಾಯಿ ಲೋಕಸೇವಾ ಪ್ರೌಢಶಾಲಾ ಮುಖ್ಯೋಪಾಧ್ಯಾಯ ರಘು ಟಿ.ವೈ, ಅಂಚನ್ ಗಾರ್ಮೆಂಟ್ಸ್ ಮಾಲಕ ಪ್ರಕಾಶ್ ಅಂಚನ್ ಬಂಟ್ವಾಳ, ಪ್ರಗತಿಪರ ಕೃಷಿಕ ನರಹರಿ ಪ್ರಭು ಮುಂಡ್ಕೂರು, ಶ್ರೀಮತಿ ನಯನ ಪ್ರಭು, ರಾ.ಸ್ವ.ಸಂಘದ ಕೊಡಗು ಜಿಲ್ಲಾ ಸಂಪರ್ಕ ಪ್ರಮುಖ್ ಚಿ.ನ.ಸೋಮೇಶ್, ತೃಪ್ತಿ ಯುರೋಲಜಿ ಮತ್ತು ಕಿಡ್ನಿ ಸೆಂಟರ್‌ನ ಡಾ॥ ಎಸ್.ಚಂದ್ರಶೇಖರ್ ಮಡಿಕೇರಿ, ಬ್ಯಾಂಕ್ ಉದ್ಯೋಗಿ ರಾಮಚಂದ್ರ ಶೆಣೈ ಮಂಗಳೂರು ಮುಖ್ಯ ಅತಿಥಿಗಳಾಗಿದ್ದರು. ಆಡಳಿತ ಮಂಡಳಿ ಅಧ್ಯಕ್ಷ ಬಿ.ನಾರಾಯಣ ಸೋಮಯಾಜಿ, ರಾ.ಸೇ.ಸಮಿತಿಯ ಡಾ॥ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದರು.

ಆರಂಭದಲ್ಲಿ ಶ್ರೀರಾಮ ಪ್ರೌಢಶಾಲೆಗೆ ಈ ವರ್ಷ ಸೇರ್ಪಡೆಯಾದ ವಿದ್ಯಾರ್ಥಿಗಳು ಸರಸ್ವತಿ ವಂದನೆಯ ಬಳಿಕ ಅಗ್ನಿಹೋತ್ರಕ್ಕೆ ಘೃತ ಸಮರ್ಪಣೆ ಮಾಡಿ ಭಾರತ ಮಾತೆಗೆ ಪುಷ್ಪಾರ್ಚನೆಗೈದರು. ವೇದಿಕೆಯಲ್ಲಿದ್ದ ಹಿರಿಯರು ವಿದ್ಯಾರ್ಥಿಗಳಿಗೆ ತಿಲಕಧಾರಣೆ ಮಾಡಿ ಆಶೀರ್ವಾದ ಮಾಡಿದರು. ವಿದ್ಯಾರ್ಥಿಗಳು ವೇದಮಂತ್ರ ಪಠಣ, ದೇಶಭಕ್ತಿಗೀತೆಗಳನ್ನು ಹಾಡಿದರು.

ಶಾಲಾ ಮುಖ್ಯೋಪಾಧ್ಯಾಯರು ವಸಂತ ಮಾಧವ ಸ್ವಾಗತಿಸಿದರು. ಸಹಶಿಕ್ಷಕ ವಿನೋದ್‌ಶೆಟ್ಟಿ ವಂದಿಸಿದರು. ಕು। ಸೌಮ್ಯ ಮಾತಾಜಿ ನಿರೂಪಿಸಿದರು.